(ಸಾಕ್ಷಿಗೆ ದಿನಾಂಕ: 15.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ ಬಿ.ಜಿ.ಆರ್., ವಾದಿ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಇದನ್ನು ನಾನೇ ಹೇಳಿ ಬರೆಯಿಸಿ ನನ್ನ ಸಹಿಯನ್ನು ಮಾಡಿರುತ್ತೇನೆ.

ನಿ.ಪಿ.1 ದಾಖಲೆಯನ್ನು ನಾನು ಈಗ ನೋಡುತ್ತಿದ್ದೇನೆ. ನಿ.ಪಿ.1 ದಾಖಲೆಯನ್ನು ಪ್ರತಿವಾದಿಯರು ವಾದಿಗೆ ಬರೆದುಕೊಟ್ಟಿರುತ್ತಾರೆ. ನಿ.ಪಿ.1 ದಾಖಲೆಗೆ ವಾದಿ ಮತ್ತು 1 ರಿಂದ 4ನೇ ಪ್ರತಿವಾದಿಯರು ಸಹಿ ಮಾಡಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಗಳನ್ನು ಈಗಾಗಲೇ ಅನುಕ್ರಮವಾಗಿ ನಿ.ಪಿ.1(ಎ) ರಿಂದ ನಿ.ಪಿ.1(ಇ) ಎಂದು ಗುರುತಿಸಲಾಗಿರುತ್ತದೆ.

ನಿ.ಪಿ.1 ದಾಖಲೆಗೆ ಸಾಕ್ಷಿದಾರರಾಗಿ ಲೋಕೇಶ್ ಮತ್ತು ನಾನು ಸಹಿ ಮಾಡಿರುತ್ತೇವೆ. ನಿ.ಪಿ.1 ದಾಖಲೆಯಲ್ಲಿರುವ ಸದರಿ ಸಹಿಗಳನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಗಳನ್ನು ಈಗಾಗಲೇ ಅನುಕ್ರಮವಾಗಿ ನಿ.ಪಿ.1(ಎಫ್) ಮತ್ತು ನಿ.ಪಿ.1(ಜಿ) ಎಂದು ಗುರುತಿಸಲಾಗಿರುತ್ತದೆ.

ನಿ.ಪಿ.1 ದಾಖಲೆಯನ್ನು ಪತ್ರಬರಹಗಾರರಾದ ಹೆಚ್.ಜಿ.ಶ್ರೀನಿವಾಸಮೂರ್ತಿ ತಯಾರಿಸಿರುತ್ತಾರೆ. ಸದರಿಯವರ ಸಹಿಯನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಯನ್ನು ಈಗಾಗಲೇ ನಿ.ಪಿ.1(ಹೆಚ್) ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ**

ಪ್ರತಿವಾದಿಯರು ಹಾಗೂ ಪ್ರತಿವಾದಿಯರ ಪರ ವಕೀಲರು ಗೈರುಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.